**ಓ ಎಸ್ 9/2021 ಡಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 10.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ6 ನೇ ಪ್ರತಿವಾದಿ ಪರ ಶ್ರೀ ಎನ್ ಎಂ ಜಿ ವಕೀಲರಿಂದಃ**

ನಮ್ಮ ತಂದೆ ಸಿ ಕೆ ದೇವೇಗೌಡರು ಕುಟುಂಬದ ಹಿರಿಯರು ಎಂದರೆ ಸರಿ. ಅವರು ವೃತ್ತಿಯಲ್ಲಿ ವ್ಯಾಪಾರಸ್ಥರು ಮತ್ತು ರಾಜಕೀಯದಲ್ಲಿ ಗಣ್ಯರಾಗಿದ್ದರು ಎಂದರೆ ಸರಿ. ನಮ್ಮ ಕುಟುಂಬ ಮೂಲತಃ ಚಂದ್ರೆ ಗ್ರಾಮಕ್ಕೆ ಸೇರಿದೆ ಎಂದರೆ ಸರಿ. ನಮ್ಮ ತಾತ ಕರೀಗೌಡ, ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪ 6 ನೇ ಪ್ರತಿವಾದಿ ವ್ಯಾಪಾರ ಮಾಡುವ ಉದ್ದೇಶದಿಂದ ಪಾಂಡವಪುರಕ್ಕೆ ಬಂದು ನೆಲಸಿದರು ಎಂದರೆ ಸರಿಯಲ್ಲ. ವಾದಿಯೂ ಸೇರಿದಂತೆ ಎಲ್ಲರೂ ಒಟ್ಟಿಗೆ ಪಾಂಡವಪುರಕ್ಕೆ ಬಂದು ನೆಲಸಿದರು. ನಮ್ಮ ತಾತ ಕರೀಗೌಡರು ಒಟ್ಟು ಕುಟುಂಬದ ಯಜಮಾನಿಕೆ ಮಾಡುತ್ತಿದ್ದರು. ನಮ್ಮ ತಾತನವರು ಒಟ್ಟು ಕುಟುಂಬದ ಯಜಮಾನಿಕೆ ವಹಿಸಿಕೊಂಡಿದ್ದಾಗ್ಯೂ ಕೆಲವು ಆಸ್ತಿಗಳನ್ನು ನಮ್ಮ ಅಜ್ಜಿ ಹೆಸರಿನಲ್ಲಿ, ಕೆಲವು ಆಸ್ತಿಗಳನ್ನು ನಮ್ಮ ತಂದೆ ಹೆಸರಿನಲ್ಲಿ ಮತ್ತು ಕೆಲವು ಆಸ್ತಿಗಳನ್ನು ನಮ್ಮ ಚಿಕ್ಕಪ್ಪಂದಿರಾದ ಸಿ.ಕೆ.ವೆಂಕಟೇಶ್ ಮತ್ತು ನಾಗರಾಜೇಗೌಡರ ಹೆಸರಿನಲ್ಲಿ ಕ್ರಯಕ್ಕೆ ಪಡೆದಿದ್ದಾರೆ. ಕುಟುಂಬದ ಸದಸ್ಯರ ನಡುವೆ ಸಾಮಾರಸ್ಯ ಇಲ್ಲದ ಕಾರಣ ನಮ್ಮ ತಾತ ಕರೀಗೌಡರು ದಿನಾಂಕ 17.09.1984 ರಂದು ನಿಶಾನೆ ಡಿ 22 ರ ರೀತ್ಯಾ ಆಸ್ತಿಗಳನ್ನು ಪಾಲುಪಟ್ಟಿ ಮೂಲಕ ಹಂಚಿಕೆ ಮಾಡಿದ್ದಾರೆ ಎಂದರೆ ಸರಿ. ನಿಶಾನೆ ಡಿ 22 ರ ಮೂಲ ದಾಖಲೆಯು ನಮ್ಮ ತಾತ ಕರೀಗೌಡರ ಸ್ವಾಧೀನದಲ್ಲಿ ಇರತಕ್ಕದ್ದು ಎಂದು ಆ ಪಾಲುಪಟ್ಟಿಯಲ್ಲಿ ಬರೆಯಲಾಗಿದೆ ಎಂದರೆ ಸರಿ. ಆ ಪಾಲುಪಟ್ಟಿಯ ನೆರಳಚ್ಚಿನ ಪ್ರತಿಗಳನ್ನು 3 ಜನ ಮಕ್ಕಳ ವಶಕ್ಕೆ ಕೊಡತಕ್ಕದ್ದು ಎಂದು ಸಹ ಆ ಪಾಲುಪಟ್ಟಿಯಲ್ಲಿ ಬರೆದಿದೆ ಎಂದರೆ ಸರಿ. ನಿಶಾನೆ ಡಿ 5 ರಲ್ಲಿರುವ ದಾಖಲೆಯು ನಿಶಾನೆ ಡಿ 22 ರ ನಕಲು ಎಂದರೆ ಸರಿ. ನಿಶಾನೆ ಡಿ 22 ರಲ್ಲಿ ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ನಾಗರಾಜೇಗೌಡರು ಸಹಿ ಮಾಡಿದ್ದಾರೆ. ನಿಶಾನೆ ಡಿ 22 ನ್ನು ಬರೆದಿರುವ ಎಂ.ಬಿ. ಕರೀಗೌಡ ಮತ್ತು ಸಾಕ್ಷಿಗಳಾದ ಸಿ.ಅಣ್ಣೇಗೌಡ,

ರಾಮೇಗೌಡ, ಮಾಯೀಗೌಡ, ಸಿ. ಚಲುವಯ್ಯ ಮತ್ತು ಹೆಚ್.ಕೆ. ಶ್ರೀಕಂಠಪ್ಪ ಇವರುಗಳು ಈಗ ಬದುಕಿಲ್ಲ ಎಂದರೆ ಸರಿ. ಸದರಿ ಪಾಲುಪಟ್ಟಿಯಲ್ಲಿ ಕೆಲವು ಆಸ್ತಿಗಳನ್ನು ಸರ್ವೆ ನಂಬರು ಮೂಲಕ ಮತ್ತು ಕೆಲವು ಆಸ್ತಿಗಳನ್ನು ಅವುಗಳ ಉಪ ನಾಮಗಳ (ಅಡ್ಡ ಹೆಸರು) ಮೂಲಕ ನಮೂದಿಸಿದ್ದಾರೆ ಎಂದರೆ ಸರಿ. ನಿಶಾನೆ ಡಿ 22 ರಲ್ಲಿನ 1984 ರಲ್ಲಿನ ಪಾಲುಪಟ್ಟಿಯ ಆಧಾರದ ಮೇಲೆ ಯಾರೂ ಸಹ ಆಸ್ತಿಗಳ ಪ್ರತ್ಯೇಕ ಸ್ವಾಧೀನಾನುಭವವನ್ನು ಪಡೆದುಕೊಳ್ಳಲಿಲ್ಲ. ಸಾಕ್ಷಿ ಮುಂದುವರಿದು 1986 ರಲ್ಲಿ ಮತ್ತೊಂದು ಪಾಲುಪಟ್ಟಿ ಆಯಿತು ಎಂದು ಹೇಳುತ್ತಾರೆ. 1986 ರವರೆಗೂ ಎಲ್ಲರೂ ಒಟ್ಟು ಕುಟುಂಬದಲ್ಲಿಯೇ ಮುಂದುವರಿದುಕೊಂಡು ಬಂದರು. 1984 ಪಾಲುಪಟ್ಟಿ ಅನುಸಾರ ಪ್ರತ್ಯೇಕ ಸ್ವಾಧೀನಾನುಭವವನ್ನು ಪಡೆದುಕೊಳ್ಳದೆ 1986 ರವರೆಗೂ ಅವಿಭಕ್ತ ಕುಟುಂಬದಲ್ಲಿ ಮುಂದುವರಿದುಕೊಂಡು ಬಂದರು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಹೇಳಿಲ್ಲ. ನ್ಯಾಯಾಲಯದಿಂದ ನೋಟೀಸು ಬಂದ ನಂತರ ಮನೆಯಲ್ಲಿ ಹುಡುಕಿದಾಗ ನಿಶಾನೆ ಡಿ 22 ರಲ್ಲಿನ ಮೂಲ ಪಾಲುಪಟ್ಟಿಯು ನನಗೆ ಸಿಕ್ಕಿತು. 1984 ರಲ್ಲಿ ವಿಭಾಗ ಮಾಡಿಕೊಳ್ಳದೆ 1986 ರಲ್ಲಿ ವಿಭಾಗ ಮಾಡಿಕೊಂಡೆವು ಎಂದು ನನ್ನ ಪ್ರತಿವಾದ ಪತ್ರದಲ್ಲಾಗಲೀ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಾಗಲೀ ಹೇಳಿಲ್ಲ.

1984 ರ ಪಾಲುಪಟ್ಟಿಯಲ್ಲಿ ಕೈ ಬಿಟ್ಟಿದ್ದ ಆಸ್ತಿಗಳನ್ನು ಮತ್ತು ಸರ್ವೆ ನಂ, 72/1 ರಲ್ಲಿ 0.06 ಗುಂಟೆ ಜಮೀನಿಗೆ ಸಂಬಂಧಿಸಿದಂತೆ 1986 ರಲ್ಲಿ ಪಾಲುಪಟ್ಟಿಯನ್ನು ಮಾಡಿಕೊಳ್ಳಲಾಯಿತು. ಸದರಿ 1986 ರ ಪಾಲುಪಟ್ಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 1986 ರಲ್ಲಿ ಪಾಲುಪಟ್ಟಿ ಮಾಡಿಕೊಳ್ಳಲಾಯಿತು ಎಂದು ಹೇಳುತ್ತಿರುವ ಸಮಯದಲ್ಲಿ ನನ್ನ ತಾತ ಕರೀಗೌಡರು ಬದುಕಿರಲಿಲ್ಲ ನಮ್ಮ ಅಜ್ಜಿ ಮಾತ್ರ ಇದ್ದರು. ಆ ಪಾಲುಪಟ್ಟಿಗೆ ನನ್ನ ಅಜ್ಜಿ ಸಹಿ ಮಾಡಿಲ್ಲ. 1986 ರ ಪಾಲುಪಟ್ಟಿಯ ಪ್ರಕಾರ ವಿಭಾಗ ಮಾಡಿಕೊಂಡು ಅದರನುಸಾರ

ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡಿಕೊಂಡಿದ್ದೇವೆ ಎಂದು ತೋರಿಸಲು ದಾಖಲೆಗಳು ಇವೆಯೋ ಇಲ್ಲವೋ ನನಗೆ ಗೊತ್ತಿಲ್ಲ. 1986 ರ ಪಾಲುಪಟ್ಟಿಯ ಆಧಾರದ ಮೇಲೆ ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪಂದಿರ ಹೆಸರಿಗೆ ಹಕ್ಕು ಬದಲಾವಣೆ ವಹಿ ನಮೂದು ಆಗಿ ಅದರ ಅನುಸಾರ ಕಂದಾಯ ದಾಖಲೆಗಳು ಅವರ ಹೆಸರಿಗೆ ಬಂದು ಅದರ ಪ್ರಕಾರ ಅವರು ಸ್ವಾಧೀನಾನುಭವ ಹೊಂದಿದ್ದರು ಎಂದು ತೋರಿಸುವ ದಾಖಲೆಗಳನ್ನು ನಾನು ನೋಡಿಲ್ಲ. 1986 ರಲ್ಲಿ ಯಾವುದೇ ವಿಭಾಗ ಆಗಿಲ್ಲ ಮತ್ತು ಅಂತಹ ಪಾಲುಪಟ್ಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಈ ದಾವೆ ಹೂಡುವುದಕ್ಕಿಂತ ಮೊದಲು 6 ನೇ ಪ್ರತಿವಾದಿ ನನಗೆ ನೋಟೀಸು ನೀಡಿದ್ದರು ಎಂದರೆ ಸರಿ. ಈಗ ನನಗೆ ತೋರಿಸಿದ ನೋಂದಾಯಿತ ಅಂಚೆ ಸ್ವೀಕೃತಿ ಮೇಲಿನ ಸಹಿಗಳು ನನ್ನ ಹಾಗೂ ನನ್ನ ಸಹೋದರ ಮತ್ತು ತಾಯಿಯ ಸಹಿಗಳಾಗಿವೆ. ಸಾಕ್ಷಿಯು ಸಹಿಗಳನ್ನು ಒಪ್ಪಿದ್ದರಿಂದ ಅವುಗಳನ್ನು ನಿಶಾನೆ ಪಿ 23, 24, 25 ಎಂದು ಗುರುತಿಸಲಾಯಿತು. ಸದರಿ ನೋಟೀಸಿನ ಸಂಗತಿಗಳನ್ನು ಓದಿ ತಿಳಿದುಕೊಂಡಿದ್ದೇನೆ. ಸದರಿ ನೋಟೀಸಿನಲ್ಲಿ ದಿನಾಂಕ 17.09.1984 ರ ಪಾಲುಪಟ್ಟಿಯ ಬಗ್ಗೆ ಹೇಳಲಾಗಿದೆ ಎಂದರೆ ಸರಿ. ನಾನು ಆ ನೋಟೀಸಿಗೆ ಯಾವುದೇ ಮರುತ್ತರ ನೀಡಿಲ್ಲ ಎಂದರೆ ಸರಿ. 1984 ರ ಪಾಲುಪಟ್ಟಿಯ ಅನುಸಾರ ನಡೆದುಕೊಳ್ಳದೆ 1986 ರ ಪಾಲುಪಟ್ಟಿಯ ಅನುಸಾರ ನಡೆದುಕೊಳ್ಳಲಾಯಿತು ಎಂದು ಹೇಳಿ ಮರುತ್ತರ ನೀಡಲು ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರಿದು ಯಾವುದೇ ನೋಟೀಸಿಗೂ ಮರುತ್ತರ ನೀಡಿಲ್ಲ ಎಂದು ಹೇಳುತ್ತಾರೆ.

ನಮ್ಮ ತಂದೆ ಬದುಕಿದ್ದಾಗ ಅವರ ಸಹೋದರರ ಜೊತೆ ಉತ್ತಮ ಬಾಂಧವ್ಯ ಹೊಂದಿರಲಿಲ್ಲ. ಭೂಸ್ವಾಧೀನ ಪ್ರಕ್ರಿಯೆ ಕಾರಣದಿಂದಾಗಿ 2011–12 ರಿಂದ

ಬಾಂಧವ್ಯ ಚೆನ್ನಾಗಿರಲಿಲ್ಲ. ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭ ಆದ ನಂತರ ನಮ್ಮ ತಂದೆಯು ದಿನಾಂಕ 17.09.1984 ರ ಪಾಲುಪಟ್ಟಿಗೆ ಅನುಗುಣವಾಗಿ ನಮ್ಮ ತಂದೆಯು ನಡೆದುಕೊಳ್ಳುತ್ತಿಲ್ಲ ಎಂಬ ಕಾರಣದಿಂದ ನಮ್ಮ ತಂದೆಹಾಗೂ ಅವರ ಸಹೋದರರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ತನ್ನ ತಂದೆಯ ಹೆಸರಿಗೆ ಮಂಜೂರಾಗಿದ್ದ ಸರ್ವೆ ನಂ. 72/1 ರಲ್ಲಿ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡು ಪ್ರಾರಂಭದಲ್ಲಿ ಪ್ರತಿಗುಂಟೆ ರೂ.6,500 ಮತ್ತು ತದನಂತರದಲ್ಲಿ ಪ್ರತಿ ಗುಂಟೆಗೆ ರೂ.1,50,000/- ಪರಿಹಾರ ನಿಗಧಿಯಾದಾಗ ಯಾರೂ ತಗಾದೆ ತೆಗೆಯದೆ ನ್ಯಾಯಾಲಯದಲ್ಲಿ ಪ್ರತಿಗುಂಟೆ ರೂ.10 ಲಕ್ಷ ನಿಗಧಿಯಾದ ನಂತರ ಎಲ್ಲರೂ ತಗಾದೆ ತೆಗೆಯಲು ಪ್ರಾರಂಭಿಸಿದರು ಎಂದು ಹೇಳುತ್ತಾರೆ. ನಿಶಾನೆ ಡಿ 22 ರಲ್ಲಿರುವ ಪಾಲುಪಟ್ಟಿಯಡಿ ಹಿರೋಡೆ ಗ್ರಾಮ ಜಮಾ ಬಂದಿಗೆ ಸೇರಿದ ಸರ್ವೆ ನಂ. 75 ರಲ್ಲಿ 41 ಏರಸ್, ಸರ್ವೆ ನಂ. 72 ರಲ್ಲಿ 31 ಏರಸ್ ಮತ್ತು ಅದೇ ಸರ್ವೆ ನಂ. 72 ರಲ್ಲಿ 6 ಏರಸ್ ಈ ಆಸ್ತಿಗಳನ್ನು ನಮ್ಮ ತಾತ ಕರೀಗೌಡ ಹಾಗೂ ಅಜ್ಜಿ ಸಣ್ಣಮ್ಮರವರ ಅಜ್ಜಪಾಲು ಎಂದು ಬಿಟ್ಟಿದ್ದರು ಎಂದರೆ ಸರಿ. ಸರ್ವೆ ನಂ. 75 ರಲ್ಲಿನ 41 ಏರಸ್ ಮತ್ತು ಸರ್ವೆ ನಂ. 72 ರಲ್ಲಿನ 31 ಏರಸ್ ಜಮೀನುಗಳು ನಮ್ಮ ತಾತ ಕರೀಗೌಡ ಹಾಗೂ ನನ್ನ ಅಜ್ಜಿ ಸಣ್ಣಮ್ಮ ತೀರಿಕೊಂಡ ನಂತರ ನನ್ನ ತಂದೆ ಸಿ ಕೆ ದೇವೇಗೌಡ ಹಾಗೂ ನನ್ನ ಚಿಕ್ಕಪ್ಪನವರಾದ 6 ನೇ ಪ್ರತಿವಾದಿ ಕೆ ನಾಗರಾಜೇಗೌಡರ ನಡುವೆ ಸಮನಾಗಿ ಹಂಚಿಕೆಯಾಗತಕ್ಕದ್ದು ಮತ್ತು ಆ ಸ್ವತ್ತುಗಳಲ್ಲಿ ನಮ್ಮ ಚಿಕ್ಕಪ್ಪ ವೆಂಕಟೇಶ್ ರವರಿಗೆ ಹಕ್ಕು ಇರುವುದಿಲ್ಲ ಎಂದು ಸದರಿ ಪಾಲುಪಟ್ಟಿಯಲ್ಲಿ ಹೇಳಿದ್ದಾರೆ ಎಂದರೆ ಸರಿ. ಇನ್ನುಳಿದ ಸರ್ವೆ ನಂ. 72 ರಲ್ಲಿನ 6 ಏರಸ್ ಆಸ್ತಿಯು ನಮ್ಮ ಚಿಕ್ಕಪ್ಪ ವೆಂಕಟೇಶ್ ರವರಿಗೆ ಮಾತ್ರ ಸೇರತಕ್ಕದ್ದು ಮತ್ತು ಅದರ ಮೇಲೆ ನಮ್ಮ ತಂದೆ ಸಿ.ಕೆ. ದೇವೇಗೌಡ ಮತ್ತು ಚಿಕ್ಕಪ್ಪ ನಾಗರಾಜೇಗೌಡರಿಗೆ ಯಾವುದೇ ಹಕ್ಕು ಇಲ್ಲ ಎಂದು ಸದರಿ ಪಾಲುಪಟ್ಟಿಯಲ್ಲಿ ಹೇಳಲಾಗಿದೆ ಎಂದರೆ ಸರಿ.

ಭೂಸ್ವಾಧೀನ ಪ್ರಕ್ರಿಯೆಯು ನಮ್ಮ ಅಜ್ಜಿ ಸಣ್ಣಮ್ಮರವರ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ಆಗ ನಮ್ಮ ತಂದೆ ಬದುಕಿದ್ದರು ಎಂದರೆ ಸರಿ. 1986 ರ ಪಾಲುಪಟ್ಟಿ ಪ್ರಕಾರ ಸರ್ವೆ ನಂ. 72 ರಲ್ಲಿನ 6 ಗುಂಟೆ ಜಮೀನು ತನ್ನ ಭಾಗಕ್ಕೆ ಬಂದಿದೆ ಎಂದು ಹೇಳಿ ನಮ್ಮ ತಂದೆಯು ಭೂಸ್ವಾಧೀನ ಪ್ರಕ್ರಿಯೆಗೆ ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ನಾವೂ ಸಹ ಅಂತಹ ಪ್ರತಿಪಾದನೆ ಮಾಡಿಲ್ಲ, ಏಕೆಂದರೆ ನಮಗೆ ದಾಖಲೆಯು 2021 ರಲ್ಲಿ ಸಿಕ್ಕಿತು. ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ವ್ಯಾಜ್ಯದಲ್ಲಿ ನಮ್ಮ ತಂದೆಯವರೇ ಎಲ್ಲರ ಪರವಾಗಿ ಪ್ರಕರಣ ನಡೆಸತಕ್ಕದ್ದು ಎಂದು ಎಲ್ಲರೂ ಸೇರಿ ಒಡಂಬಡಿಕೆ ಮಾಡಿಕೊಂಡಿದ್ದರು ಎಂದರೆ ನ್ನನ ಚಿಕ್ಕಪ್ಪ ವೆಂಕಟೇಶ್ ರವರು ಸಹಿ ಮಾಡಿಲ್ಲ ಆದರೆ ನನ್ನ ಚಿಕ್ಕಪ್ಪರವರಾದ ನಾಗರಾಜೇಗೌಡರು ಸಹಿ ಮಾಡಿದ್ದಾರೆ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**
**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**